ಎಲ್ಲರ ಎಲೆಯ ಮುಂದಿದ್ದ ಲೋಟಗಳಿಗೆ ಕಾಫಿ ತುಂಬಿಸಿದ ಬಾಲೆ ಇವನ ಎಲೆಯೆದುರು ಬಂದಿದ್ದಳು. ರಾಮಚಂದ್ರ ಕೇದಗೆ ಬಣ್ಣದ ಸುಕೋಮಲ ಪಾದಗಳನ್ನು ಗಮನಿಸಿದ್ದ. ಕಾಫಿ ಹಾಕುತ್ತಿದ್ದವಳ ಕೈಗಳು ನಸು ಕಂಪಿಸುತ್ತಿದ್ದುವೇ? ಅತ್ತಿತ್ತ ಎರಡೆರಡು ಚಿನ್ನದ ಬಳೆಗಳ ನಡುವೆ ಅರೆ ಡಜನ್ನಿಗೆ ಕಡಿಮೆ ಇಲ್ಲದೆ ಕಿಂಕಿಣಿಸುವ ಹಸಿರುಗಾಜಿನ ವರ್ಕ್‌ನ ಬಳೆಗಳು. ಉಟ್ಟಿದ್ದೂ ಪಾಚಿ ಬಣ್ಣದ ಒಂದೆಳೆಯ ರೇಷ್ಮೆ ಸೀರೆ. ಮಲೆನಾಡಿನ ಹುಡುಗಿಗೆ ಹಸಿರು ಪ್ರಿಯವಾಗದೆ ಮತ್ತ್ಯಾವುದಾಗಿರಲು ಸಾಧ್ಯ? ರಾಮಚಂದ್ರ ಕತ್ತೆತ್ತಿ ಸನಿಹದಲ್ಲಿ ಬಗ್ಗಿದ್ದ ಮುಖವನ್ನು ಗಮನಿಸಿದ್ದ. ಹುಡುಗಿ ಚೆಲುವೆ ಎನ್ನುವುದನ್ನು ಅರೆಕ್ಷಣದಲ್ಲಿ ಕಣ್ಣುಗಳು ಖಾತ್ರಿ ಪಡಿಸಿದ್ದುವು. ಅವಳ ಮುಖ ರಂಗೇರಿ, ಕಾಫಿ ಲೋಟ ತುಂಬಿ ತುಳುಕಿ, 'ಅರೆರೇ, ಕಾಫಿ ಚೆಲ್ಲಿದೀಯಲ್ಲೇ ಮಗೂ?' ಶೀನಪ್ಪಯ್ಯ ಎಚ್ಚರಿಸಿದ್ದರು. ತನ್ನ ಅನ್ಯಮನಸ್ಕತೆಗೆ ತಾನೇ ನಾಚಿದ್ದ ಹುಡುಗಿ ತಕ್ಷಣ ಒಳಗೆ ನಡೆದಿದ್ದಳು, ಓಡುನಡಿಗೆಯಲ್ಲಿ.

ತಿಂಡಿ ತಿಂದು, ಕಾಫಿ ಕುಡಿದು, ಮತ್ತೆ ಮುಂಚೇಕಡೆಯಲ್ಲಿ ಸೇರಿತ್ತು ಗಂಡಸರ ಸಭೆ. ಕೊಳೆ ರೋಗ, ಅಡಿಕೆ ರೇಟು, ಭತ್ತದ ದರ, ಎಂದು ಬೇಡದ ಕರಟು ಪುರಾಣ ಮಾತಾಡುತ್ತಿದ್ದಾರೆಯೇ ವಿನಾ ಶೀನಪ್ಪಯ್ಯ ಇವತ್ತಿನ ಕಾರ್ಯಕ್ರಮದ ಕುರಿತಾಗಿ ಉಸಿರೊಡೆಯುತ್ತಿಲ್ಲ. ತಾನು ಹುಡುಗಿಯನ್ನು ಪಾಸು ಮಾಡಿದರೆ ಸಾಕಾ? ಈಗ ಪಾಸು ಮಾಡಬೇಕಾದ ಸ್ಥಾನದಲ್ಲಿ ನಿಂತಿರುವವರು ಶೀನಪ್ಪಯ್ಯ. ಯಾರು ನೋಡಿದರೂ ದೂಸರಾ ಮಾತಾಡದಂತಿದ್ದಾಳೆ ಹುಡುಗಿ. ಪೇಟೆಗೀಟೆಯ ಕನಸು ಕಾಣುವ ಈ ಕಾಲದ ಹುಡುಗಿಯರಿಗೆ ಹೆಚ್ಚು ಓದದ, ಜಮೀನು, ಮನೆಗೆ ಕಚ್ಚಿಕೊಂಡಿರುವ ತನ್ನಂತಾ ಸಾಧಾರಣ ಮನುಷ್ಯ ಪಥ್ಯವಾಗಬಹುದಾ? ರಾಮಚಂದ್ರನಿಗೆ ತಳಮಳ.

'ಹಂಗಾರೆ ನಾವಿನ್ನು ಹೊರಡೋದಾ? ಕತ್ಲಾಗೋದ್ರೊಳಗೆ ಮನೆ ಸೇರ್ಕಂಡ್ರೆ ವಾಸಿ..' ಅಣ್ಣ ಹೊರಡುವ ಸೂಚನೆ ತೋರಿಸಿದ. ಆಗಲೂ ಶೀನಪ್ಪಯ್ಯ ಮುಗುಂ ಆಗಿ ಹೇಳಿದ್ದಿಷ್ಟೇ,

'ಆಯ್ತು, ನೋಡಣ. ಋಣಾನುಬಂಧ ಇತ್ತೂಂತಾದ್ರೆ ಯಾರೂ ತಪ್ಸಿಸೋಕಾಗಲ್ಲ..'

ಮುದ್ದಿನ ಮಗಳನ್ನು ಒಂದು ಮಾತು ವಿಚಾರಿಸದೆ, ಹೆಂಡತಿಯ ಜೊತೆ ಮಂತ್ರಾಲೋಚನೆ ನಡೆಸದೆ, ಯಜಮಾನನೆನಿಸಿಕೊಂಡ ಮಾತ್ರಕ್ಕೆ ನಿಂತ ಮೆಟ್ಟಿನಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಸಾಧ್ಯವಿಲ್ಲ ಎನ್ನುವಂತಾ ಮಾತಾಡಿ ಚಡಪಡಿಸುತ್ತಿದ್ದ ಚೇತನಕ್ಕೆ ಸಮಾಧಾನ ಸಿಂಪಡಿಸಿದ್ದು ಅಣ್ಣ. ಐತಾಳರೂ ಅದೇ ಮಾತು ಹೇಳಿದ್ದರು,

'ಹೂಂ ಮತ್ತೆ. ತಣ್ಣೀರನ್ನೂ ಆರಿಸಿ ಕುಡೀಬೇಕು ಅನ್ನೋ ಹಾಗಾಗಿದೆ ಕಾಲ. ತಣ್ಣಗೆ ಕೂತು ಯೋಚ್ನೆ ಮಾಡಿ ನೀವೂ ನಿರ್ಧಾರ ತಗಳ್ಳಿ..'

* * *

ಹದಿನೈದಿಪ್ಪತ್ತು ದಿನಗಳಾದರೂ ಆ ಕಡೆಯಿಂದ ಸುದ್ದಿ ಇಲ್ಲ. ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವಂತೆ ಉರು ಹಾಕುತ್ತಿದ್ದಳು ಅಮ್ಮ,

'ಅವರಾಗಿ ಕೇಳ್ದೆ ನಾವೇ ಮೇಲೆ ಬಿದ್ದು ಹೋಗೋಕಾಗುತ್ತಾ? ಆಮೇಲೆ ಅವರೇನಾರೂ ತಾರಮ್ಮಯ್ಯ ಅಂತ ಕೈಯಾಡಿಸಿಬಿಡ್ಲಿ. ಮಕಕ್ಕೆ ಮಂಗಳಾರತಿ ಆಗುತ್ತೆ. ಎಷ್ಟಾರೂ ನಾವು ಗಂಡಿನ ಕಡೆಯೋರು. ಒಂದಲ್ದಿದ್ರೆ ಹತ್ತು ಸಂಬಂಧ ಹುಡುಕ್ಕಂಬರುತ್ತೆ..'

ಏನೂ ಆಗದಿದ್ದವರ ಥರ ನಟನೆ ಮಾಡುತ್ತಾ, ಒಳಗಿಂದೊಳಗೆ ಕುದ್ದು ಹೋಗುತ್ತಾ, ರಾಮಚಂದ್ರ ನಾಗಶ್ರೀ ಅನ್ನುವ ಹುಡುಗಿಗೆ ಸಂಪೂರ್ಣ ಮರುಳಾಗಿಬಿಟ್ಟಿದ್ದ. ಹತ್ತು ಜನರ ಮಧ್ಯೆ ಹುಟ್ಟಿದವಳಾಗಿದ್ದರೂ ತಾನು ಅವಳನ್ನು ಮದುವೆಯಾಗುತ್ತಿದ್ದೆ ಎಂದು ಕನವರಿಸುತ್ತಿದ್ದ. ದುಡ್ಡುಕಾಸು, ಆಸ್ತಿಪಾಸ್ತಿ, ನಗನಾಣ್ಯಗಳು ಅಲಾಯಿದ. ತಾವಾಗಿ ಸಿಕ್ಕಿದರೆ ಹಿಂದಿನ ಜನ್ಮದ ಪುಣ್ಯ. ಸಿಗಲಿಲ್ಲ, ಬೇಡ. ಕೈ ಹಿಡಿದವಳನ್ನು ಸಾಕುವ ಯೋಗ್ಯತೆಯಿಲ್ಲದವನು ಮದುವೆ ಯಾಕಾಗಬೇಕು? ಅವಳು ತರುವ ಸಂಪತ್ತಿಗೆ ಜೊಲ್ಲು ಸುರಿಸಬೇಕು? ಆ ಹುಡುಗಿಯಾದರೂ ಅದೆಂತಾ ವಿಚಿತ್ರದ್ದು. ಹೊರಡುವ ಹೊತ್ತಿಗೆ ಅಪ್ಪ, ಅಮ್ಮ ಬಂದು ಮುಂಚೇಕಡೆಯ ಮೆಟ್ಟಿಲ ಮೇಲೆ ಬೀಳ್ಕೊಡಲು ನಿಂತಿದ್ದರಲ್ಲ, ಅವಳು ಬಂದು ಒಂದು ಗಳಿಗೆ ಮಕ ತೋರಿಸಿದ್ದರೆ ಏನಾಗುತ್ತಿತ್ತು? ಈ ಸೂಕ್ಷ್ಮದಲ್ಲೇ ಅವಳಿಗೆ ತಾನು ಇಷ್ಟವಾಗಿಲ್ಲ ಎಂದು ಅರ್ಥ ಮಾಡಿಕೊಳ್ಳದ ಮೇಲೆ ತಾನಿನ್ನೆಂತಾ ಬುದ್ಧಿವಂತ? ಹುಡುಗಿ ನೋಡಲು ಹೋದ ಮೊದಲ



## ಇಲ್ಲಿಯವರೆಗೆ

ರಾಮಚಂದ್ರನ ಅಣ್ಣ ರಘುರಾಮನಿಗೆ ಬಡವರ ಮನೆಯ ಹುಡುಗಿ ಅದೂ ಅವನು ಮೆಚ್ಚಿ ಮದುವೆ ಆಗಲು ನಿರ್ಧರಿಸಿದ್ದ ಹುಡುಗಿಯೊಂದಿಗೆ ಮದುವೆಯಾಗುತ್ತದೆ. ಇತ್ತ ರಾಮಚಂದ್ರನಿಗೆ ಶ್ರೀಮಂತ ಮನೆತನದ ಹಾಗೂ ಒಬ್ಬಳೇ ಮಗಳಿರುವ ಮನೆಯಿಂದ ಹೆಣ್ಣು ತರಬೇಕು ಎನ್ನುವುದು ಅಮ್ಮನ ಕನಸು. ಅದರಂತೆ ರಾಮಚಂದ್ರನಿಗೆ ನಾಗಶ್ರೀಯ ಜಾತಕ ಬರುತ್ತದೆ. ಎಲ್ಲವೂ ಚೆನ್ನಾಗಿ ಹೊಂದಾಣಿಕೆಯಾಗುತ್ತದೆ ಎಂದು ಜ್ಯೋತಿಷರು ಹೇಳುತ್ತಾರೆ. ಈ ಮಧ್ಯೆ ರಾಮಚಂದ್ರನ ಅಪ್ಪ ಮನೆಯಲ್ಲಿ ಹಾವು ಕಡಿದು ಸಾಯುತ್ತಾರೆ. ಒಂಟಿ ಹೆಂಗಸು ಶಿವಮೊಗ್ಗ ಪೇಟೆಗೆ ಹೋಗಿ ಅಡಿಕೆ ಮಂಡಿ ವ್ಯಾಪಾರದಿಂದ ಹಿಡಿದು ಇಡೀ ಮನೆಯನ್ನು ಸಂಭಾಳಿಸಿಕೊಂಡು ಬರುವ ಗಟ್ಟಿಗಿತ್ತಿ ಎನಿಸಿಕೊಳ್ಳುತ್ತಾಳೆ. ರಾಮಚಂದ್ರನಿಗೆ ಗೊತ್ತುಮಾಡಿದ ಹುಡುಗಿಯ ಮನೆಗೆ ವಧು ನೋಡುವ ಶಾಸ್ತ್ರಕ್ಕೆ ಮನೆಯಿಂದ ಹೋಗುವವರ ಜತೆ ಸೊಸೆ ಭವಾನಿಯನ್ನು ಕಳಿಸಿಕೊಡುತ್ತಾರೆ ರಾಮಚಂದ್ರನ ಅಮ್ಮ.

ಅನುಭವದಲ್ಲೇ ಕಹಿ ಮಾತ್ರೆ ನುಂಗಿದ ಹಾಗಾಯ್ತು. ರಾಮಚಂದ್ರ ಎಷ್ಟೇ ಸಮಾಧಾನ ಮಾಡಿಕೊಳ್ಳಲೆತ್ನಿಸಿದರೂ ಮನಸ್ಸಿನ ಬೇಗುದಿ ತಪ್ಪದೆ, ಒಬ್ಬ ವಿವಾಹಯೋಗ್ಯ ಯುವಕನನ್ನು ಮನೆಬಾಗಿಲವರೆಗೆ ಕರೆಸಿಕೊಂಡು ತಿರಸ್ಕಾರ ಮಾಡುವುದು ಅಂದರೆ ಏನರ್ಥ ಎನ್ನುವ ಅವಮಾನದಿಂದ ರಾಮಚಂದ್ರ ವಿಷಣ್ಣನಾಗಿಬಿಟ್ಟಿದ್ದ. ಮುಖದ ಕಳೆ ಬತ್ತಿ ಹೋಗಿದ್ದಕ್ಕೆ ಗಡ್ಡ ಕೀಸಿಕೊಳ್ಳದೆ ಇದ್ದುದೂ ಒಂದು ಕಾರಣ ಇರಬಹುದು. ಅಡಿಕೆ ಸಂಭಾವನೆಗೆ ಅಂತ ಆ ಬ್ರಾಹ್ಮಣ ಇನ್ನೊಂದು ಸಲ ಮನೆಯ ಮೆಟ್ಟಿಲು ಹತ್ತಲಿ, ಕಾಲು ಮುರಿದು ಕೈಗೆ ಕೊಟ್ಟು, ಐತಾಳರ ತಪ್ಪು ಏನೂ ಇಲ್ಲದಿದ್ದರೂ ಅವರ ಮೇಲೂ ಕೆಂಗಣ್ಣು. ಜನ ಎಂತೆಂತವರಿರುತ್ತಾರೆ ಎಂದು ಅರ್ಥ ಮಾಡಿಕೊಳ್ಳದೆ ತಮ್ಮನ್ನು ಹೊರಡಿಸಿಕೊಂಡು ಹೋಗುವುದಾ? ಅವರ ಮನೆಯ ತಿಂಡಿ ತಿನ್ನಲು ತಾವು ಗತಿಗೆಟ್ಟುಕೊಂಡು ಹೋಗಿದ್ದಾ? ರಾಮಚಂದ್ರ ಒಳಗೊಳಗೇ ಕುಸಿದು ಹೋಗುತ್ತಿದ್ದ. ಬೇಡ ಎಂದು ತಲೆ ಕೊಡಕಿಕೊಂಡರೂ ಅದದೇ ಹಾಳು ಯೋಚನೆಗಳು ಮುತ್ತಿಕೊಂಡು ಬಿಡುತ್ತಿದ್ದುವು. ಹೀಗಿರುವಾಗ..

* * *

'ಒಂದು ಕಾರ್ಡ್ ಗೀಚಿ ಹಾಕಿದ್ರೂ ಸಾಕಿತ್ತು ಮಾರಾಯ್ರಾ, ಹುಡುಗಿ ನೋಡ್ಕಂಬಂದೋರು ತಣ್ಣಗೆ ಕೂತ್ಗಂಬಿಡೋದಾ? ನೀವು ಏನೂ ಹೇಳ್ಲಿಲ್ಲ ಅಂತ ಅವರು ಪುಕಾರು ಮಾಡ್ತಿದಾರೆ' ಒಂದು ದಿನ ಮೂರು ಸಂಜೆಯ ಹೊತ್ತಿಗೆ ಮನೆಗೆ ಬಂದ ಐತಾಳರ ಸವಾರಿ ಆರೋಪ ಮಾಡಿತು.

ಹುಡುಗಿ ನಮಗೆ ಒಪ್ಪಿಗೆ. ಮುಂದಿನ ವಿಚಾರ ಕೂತ್ಗಂಡು ಮಾತಾಡಣ ಅನ್ನುವುದು ಆ ದಿನಮಾನದ ಪದ್ಧತಿ. ಆದರೆ ಇಲ್ಲಿ ಪರಿಸ್ಥಿತಿ ಹಾಗಿರಲಿಲ್ಲವಲ್ಲ?